ಕನ್ನಡ ಅನುಷ್ಠಾನ ವರ್ಷ ೨೦೦೯

ಹಾಸನ ಗ್ರಾಮೀಣ ಭಾರತ

ಜಿಲ್ಲಾ ಪಂಚಾಯತ್, ಹಾಸನ

(ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳ ಹಾಗೂ ಪಂಚಾಯತ್‌ರಾಜ್ ಸಂಸ್ಥೆಗಳ
ಚಟುವಟಿಕೆಯನ್ನು ಪ್ರಚುರಪಡಿಸುವ ಕನ್ನಡ ಮಾಸ ಪತ್ರಿಕೆ)

ಸಂಪುಟ-1 ಸಂಚಿಕೆ-49 ಅಕ್ಟೋಬರ್- 2009 ಉಚಿತ ಪ್ರಸಾರಕ್ಕೆ ಪುಟ:20

ದಿನಾಂಕ 31-10-2009ರಂದು ಜಿಲ್ಲಾ ಪಂಚಾಯತ್ ಹೊಯ್ಸಳ ಸಭಾಂಗಣದಲ್ಲಿ 2009-10ನೇ ಸಾಲಿನ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಆಯ್ಕೆಗೊಳಿಸುತ್ತಿರುವ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರುಗಳಿಗೆ ತರಬೇತಿ ಕಾರ್ಯಗಾರವನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಕಾಮಾಕ್ಷಿರಾಜುರವರು ಉದ್ಘಾಟಿಸಿದರು. ವೇದಿಕೆಯಲ್ಲಿ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ನಿರ್ದೇಶಕರಾದ ಡಾ॥ ಪಿ. ಬೋರೇಗೌಡರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಎಂ. ಆರ್. ಬಾಲಕೃಷ್ಣರವರು, ಮುಖ್ಯ ಯೋಜನಾಧಿಕಾರಿಗಳಾದ ಶ್ರೀ ಹೆಚ್. ಸಿದ್ದವ್ವರವರು ಉಪಸ್ಥಿತರಿದ್ದರು.

(ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಚಟುವಟಿಕೆಯನ್ನು ಪ್ರಚುರ ಪಡಿಸುವ ಕನ್ನಡ ಮಾಸ ಪತ್ರಿಕೆ)

ಜಿಲ್ಲಾ ಪಂಚಾಯತ್ ಹಾಸನ

ವ್ಯವಸ್ಥಾಪಕ ಸಂಪಾದಕರು
ಶ್ರೀಮತಿ ಕಾಮಾಕ್ಷಿ ರಾಜು
ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಹಾಸನ.

ಶ್ರೀ ಎ.ಈ ಚಂದ್ರಶೇಖರ್ ಉ॥ ಅಣತಿ
ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ಹಾಸನ.

ಪ್ರಧಾನ ಸಂಪಾದಕರು :
ಶ್ರೀ ಎಂ.ಆರ್. ಬಾಲಕೃಷ್ಣ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಹಾಸನ.

ಸಂಪಾದಕರು :
ಶ್ರೀ ಹೆಚ್. ಸಿದ್ದಪ್ಪ,
ಮುಖ್ಯ ಯೋಜನಾಧಿಕಾರಿಗಳು.
ಜಿಲ್ಲಾ ಪಂಚಾಯತ್, ಹಾಸನ.

ಸಹ ಸಂಪಾದಕರು :
ಶ್ರೀ ಹೆಚ್.ವಿ. ನಾಗರಾಜ
ಯೋಜನಾ ಅಂದಾಜು ಮತ್ತು ಮೌಲ್ಯ ಮಾಪನಾಧಿಕಾರಿ
ಜಿಲ್ಲಾ ಪಂಚಾಯತ್, ಹಾಸನ.

ಶ್ರೀ ಎಲ್.ಬಿ. ಮಹೇಶ್
ಸಹಾಯಕ ಸಾಂಖ್ಯಿಕ ಅಧಿಕಾರಿ
ಜಿಲ್ಲಾ ಪಂಚಾಯತ್, ಹಾಸನ.

ಕಛೇರಿ ವಿಳಾಸ :
ಹಾಸನ ಜಿಲ್ಲಾ ಗ್ರಾಮೀಣ ಭಾರತ
ಯೋಜನಾ ಶಾಖೆ
ಜಿಲ್ಲಾ ಪಂಚಾಯತ್ ಕಛೇರಿ,
ಹಾಸನ – 573 201
ದೂರವಾಣಿ : 08172– 267535

ಹಾಸನ ಗ್ರಾಮೀಣ ಭಾರತ

ಕ್ರ. ಸಂ.	ವಿಷಯ	ಪುಟಸಂಖ್ಯೆ
1.	ಶೌಚಾಲಯ ಕಟ್ಟೋಕೆ ದುಡ್ಡಲ್ಲ ಬೇಕಾಗಿರೋದು ಸ್ವಾಮಿ ಮನಸ್ಸು ಸ್ವಾಮಿ ಮನಸ್ಸು	3
2.	ಜಿಲ್ಲಾ ಪಂಚಾಯತ್, ಹಾಸನ. ಇವರ ಪತ್ರ (ಗ್ರಾಮೀಣ ನಿವೇಶನ ಯೋಜನೆ ಗುರಿಯನ್ನು ನಿಗದಿಪಡಿಸಿರುವ ಬಗ್ಗೆ)	4
3.	ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (ನಿವೇಶನಗಳ ಗುರಿಯನ್ನು ನಿಗದಿಪಡಿಸಿರುವ ಬಗ್ಗೆ)	5–7
4.	ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂದಿಸಿದ ಸುತ್ತೋಲೆ ಮತ್ತು ಪತ್ರಗಳು	8–17
6.	ಸಭೆ/ ಸಮಾರಂಭ/ ಕಾಮಗಾರಿಗಳ ಭಾವಚಿತ್ರಗಳು	18–19

ಗಮನಿಸಿ :

ಹಾಸನ ಜಿಲ್ಲಾ ಪಂಚಾಯಿತಿಗೆ ಬರುವ ಎಲ್ಲಾ ಕಛೇರಿಗಳ ಮುಖ್ಯಸ್ಥರು ಹಾಗೂ ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯತ್ ಅಧಿಕಾರಿಗಳು ತಮ್ಮ ಇಲಾಖೆಗಳ ಕಾರ್ಯಚಟುವಟಿಕೆಗಳ ಕುರಿತಾದ ಬರಹ, ಲೇಖನ, ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ವರದಿಯನ್ನು ಭಾವಚಿತ್ರದ ಸಹಿತ ಪ್ರತಿ ತಿಂಗಳು 5ನೇ ತಾರೀಖಿನ ಒಳಗಾಗಿ ಸಂಪಾದಕರಾದ.

ಶ್ರೀ ಹೆಚ್. ಸಿದ್ದಪ್ಪ,
ಮುಖ್ಯ ಯೋಜನಾಧಿಕಾರಿಗಳು.
ಜಿಲ್ಲಾ ಪಂಚಾಯತ್, ಹಾಸನ – 573 201.
ಇವರಿಗೆ ತಲುಪಿಸಲು ಕೋರಲಾಗಿದೆ.

ಇಂತಿ
ಸಂಪಾದಕರು

ಶೌಚಾಲಯ ಕಟ್ಟೋಕೆ ದುಡ್ಡಿಲ್ಲ ಬೇಕಾಗಿರೋದು ಸ್ವಾಮಿ ಮನಸ್ಸು ಸ್ವಾಮಿ ಮನಸ್ಸು

ಶೌಚಾಲಯ ಕಟ್ಟೋಕೆ ದುಡ್ಡಿಲ್ಲ ಬೇಕಾಗಿರೋದು ಸ್ವಾಮಿ ಮನಸ್ಸು ಸ್ವಾಮಿ ಮನಸ್ಸು ನಿರ್ಮಲ ಗ್ರಾಮ ಅಭಿವೃದ್ಧಿಯ ಸಂಕೇತ. ಕುರಿಕೋಳಿ ಸಾಕಿ ಸೊಳ್ಳೆ ಸಾಕಬೇಡಿ. ಚೆಂಬು ಹಿಡಿದು ಕೆರೆ ಕಡೆ ಹೋಗುವ ಪದ್ಧತಿ ಬಿಡಿ. ಎಂದು ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ನಿರ್ದೇಶಕರಾದ ಶ್ರೀಯುತ ಡಾ॥ ಪಿ. ಬೋರೇಗೌಡರವರು ತಿಳಿಸಿದರು. ದಿನಾಂಕ: 31–10–2009 ರಂದು ಹಾಸನ ಜಿಲ್ಲಾ ಪಂಚಾಯತ್‌ನ ಸಭಾಂಗಣದಲ್ಲಿ ನಡೆದ 2009–10ನೇ ಸಾಲಿನ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಅಣಿಗೊಳಿಸುತ್ತಿರುವ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿ ಹಾಗೂ ಅಧ್ಯಕ್ಷರುಗಳಿಗೆ ನಡೆದ ತರಬೇತಿ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ನಿರ್ಮಲವೆಂಬುದು ಅಭಿವೃದ್ಧಿಯ ಸಂಕೇತ. ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರು ಹೇಳುವಂತೆ ನಿರ್ಮಲ ಎಂಬುದು ಜನರ ಜೀವನ ವಿಧಾನವಾಗಬೇಕು. ಎಂಬ ಮಾತು ಅಕ್ಷರ ಸಹ: ಪಾಲಿಸಲು ಇಡೀ ಜಿಲ್ಲೆಯಲ್ಲಿ ಅದನ್ನು ಅಳವಡಿಸಿಕೊಳ್ಳಲು ಕರೆ ಇತ್ತರು. ಇದನ್ನು ಅವರು ಅವರು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾಗಿದ್ದಾಗ ಅಳವಡಿಸಿಕೊಂಡು ಇಡೀ ಜಿಲ್ಲೆಯಲ್ಲಿ ಯಶಸ್ಸು ಸಾಧಿಸಿದ ಬಗ್ಗೆ ಸಭಿಕರಿಗೆ ತಿಳಿಸಿದರು. ಇದರಿಂದ ಉತ್ತೇಜನಗೊಂಡ ಕಾರ್ಯದರ್ಶಿಗಳು ಅಧ್ಯಕ್ಷರು ತಮ್ಮ ತಮ್ಮ ಗ್ರಾಮ ಪಂಚಾಯತಿಗಳನ್ನು 6 ತಿಂಗಳಲ್ಲಿ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ತಯಾರು ಮಾಡುವುದಾಗಿ ಭರವಸೆಯಿತ್ತರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಶ್ರೀಯುತ ಆರ್. ಬಾಲಕೃಷ್ಣರವರು ಮಾತನಾಡಿ ನೈರ್ಮಲ್ಯಕ್ಕೂ ಆರೋಗ್ಯಕ್ಕೂ ಸಂಬಂಧವಿದೆ. ಸಂಪ್ರದಾಯದ ಹೆಸರಿನಲ್ಲಿ ಸ್ವಚ್ಛತೆ ಕಂದಾಚಾರಕ್ಕೆ ತಿರುಗಿದೆ. ಆದ್ದರಿಂದ ಮನೆಗೊಂದು ಶೌಚಾಲಯ ನಿರ್ಮಿಸಿಕೊಳ್ಳಲು ಸಾಧ್ಯವಾಗದಂತಹ ಬಡತನ ನಮ್ಮಲ್ಲಿದೆಯೇ? ಎಂಬುದಾಗಿ ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರಾದ ಶ್ರೀಮತಿ ಕಾಮಾಕ್ಷಿರಾಜು ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡುತ್ತಾ ಗ್ರಾಮಾಂತರ ಪ್ರದೇಶದ ಜನರು ತಮ್ಮ ಗ್ರಾಮ ಹಾಗೂ ಮನೆಯ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳು ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಈಗಿನಿಂದಲೇ ತಯಾರಾಗಬೇಕೆಂದರು. ಶ್ರೀಯುತ ಬೋರೇಗೌಡರವರು ನೀಡಿದ ಹಿತವಚನ ಅವರು ಅನುಭವದ ಕಥೆಗಳು ಎದುರಾದ ಸವಾಲುಗಳು, ಎದ್ದುನಿಂತ ಸಮಸ್ಯೆಗಳು ಕಂಡುಕೊಂಡ ಪರಿಹಾರಗಳು ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಗ್ರಾಮಗಳನ್ನು ಸಿದ್ದಪಡಿಸಲು ಹೆಚ್ಚಿನ ಪ್ರೇರಣೆಯಾಯಿತು. ಅದರಂತೆ ಹಾಸನ ಜಿಲ್ಲೆಯಲ್ಲಿ 2009–10ನೇ ಸಾಲಿಗೆ 130 ಗ್ರಾಮ ಪಂಚಾಯತ್‌ಗಳನ್ನು ನಿರ್ಮಲಗ್ರಾಮ ಪುರಸ್ಕಾರಕ್ಕೆ ಅಣಿಗೊಳಿಸಲು ತೀರ್ಮಾನಿಸಲಾಯಿತು.

ಟಿ.ಎಸ್.ಸಿ. ಜಿ.ಪಂ. ಹಾಸನ

ಹಾಸನ ಜಿಲ್ಲಾ ಪಂಚಾಯತ್

08172 – 267534 ಮು.ಕಾ.ಅ.
08172 – 268824 ಆಡಳಿತ
08172 – 267498 ಲೆಕ್ಕಪತ್ರ
08172 – 267535 ಯೋಜನೆ
08172 – 267401 ಫ್ಯಾಕ್ಸ್
08172 – 267549 ಪರಿಷತ್
08172 – 268339 ಅಭಿವೃದ್ಧಿ

ಕನ್ನಡ ಅನುಷ್ಠಾನ ವರ್ಷ 2009

ಜಿಪಂಹಾ : ಯೋವಿ (4) ಗ್ರಾಮೀಣ ಆಶ್ರಯ/ನಿವೇಶನ/151/2009–10 ದಿನಾಂಕ : 26.10.2009

ತುರ್ತು ಮತ್ತು ಪ್ರಾಮುಖ್ಯ

ಜಿಲ್ಲೆಯ ಎಲ್ಲಾ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೆ,

ವಿಷಯ:– ಗ್ರಾಮೀಣ ನಿವೇಶನ ಯೋಜನೆ 2009–10ನೇ ಸಾಲಿನಲ್ಲಿ ನಿವೇಶನಗಳ ಗುರಿಯನ್ನು ನಿಗದಿಪಡಿಸಿರುವ ಬಗ್ಗೆ.

ಉಲ್ಲೇಖ : ವ್ಯವಸ್ಥಾಪಕ ನಿರ್ದೇಶಕರು (ಪ್ರಭಾರ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಬೆಂಗಳೂರು ಇವರ ಪತ್ರಸಂಖ್ಯೆ ಎಂ.ಡಿ/ಆರ್.ಜಿ ಆರ್.ಹೆಚ್.ಸಿ.ಎಲ್./01/ಹೆಚ್ಎಸ್ಅ/50/2009/9639 ದಿ. 12–10–2009.

ಮೇಲ್ಕಂಡ ವಿಷಯ & ಉಲ್ಲೇಖ ಪತ್ರಕ್ಕೆ ಸಂಬಂಧಿಸಿದಂತೆ ಉಲ್ಲೇಖ ಪತ್ರದ ಪ್ರತಿಯನ್ನು ಪತ್ರದೊಂದಿಗೆ ಲಗತ್ತಿಸುತ್ತಾ ಸದರಿ ಪತ್ರದಲ್ಲಿ ವಸತಿ ನಿಗಮದವರು 2009–10ನೇ ಸಾಲಿಗೆ ಗ್ರಾಮೀಣ ನಿವೇಶನ ಯೋಜನೆಯಡಿಯಲ್ಲಿ ನಿವೇಶನಗಳ ಗುರಿಯನ್ನು ತಾಲ್ಲೂಕುವಾರು ಹಂಚಿಕೆ ಮಾಡಿ ನಿಗದಿ ಪಡಿಸಿರುತ್ತಾರೆ. ಹಾಗೂ ಫಲಾನುಭವಿಗಳ ಆಯ್ಕೆಗೆ ಸಂಬಂಧಿಸಿದಂತೆ ನಿಯಮಾನುಸಾರ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. ಆದ್ದರಿಂದ ವಸತಿ ನಿಗಮ ದವರು ತಿಳಿಸಿರುವ ನಿಯಮದಂತೆ ಕ್ರಮ ವಹಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ
ಸಹಿ/–
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯಿತಿ ಹಾಸನ.

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

MD RGRHCL 01 HSA 50 2009 / 9639 **Date: 12.10.2009**

ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್
ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯತ್

ಮಾನ್ಯರೇ,

ವಿಷಯ : ಗ್ರಾಮೀಣ ನಿವೇಶನ ಯೋಜನೆ – 2009–10ನೇ ಸಾಲಿನಲ್ಲಿ
ನಿವೇಶನಗಳ ಗುರಿಯನ್ನು ನಿಗದಿಪಡಿಸಿರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಜೂನ್–2003ರಲ್ಲಿ ಗ್ರಾಮ ಪಂಚಾಯತಿಗಳ ಮೂಲಕ ನಿವೇಶನ ರಹಿತರ ಹಾಗೂ ವಸತಿ ರಹಿತರ ಸಮೀಕ್ಷೆ ನಡೆಸಲಾಗಿದ್ದು, ಈ ಸಮೀಕ್ಷೆ ಪ್ರಕಾರ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವೇಶನ ರಹಿತರ ಸಂಖ್ಯೆ ಹಾಗೂ ಸಮೀಕ್ಷೆ ನಂತರ ವಿತರಿಸಲಾಗಿರುವ ನಿವೇಶನಗಳ ಸಂಖ್ಯೆ ಕೆಳಗಿನಂತೆ ಇರುತ್ತದೆ.

ಪ್ರದೇಶ	ಸಮೀಕ್ಷೆ ಪ್ರಕಾರ ನಿವೇಶನ ರಹಿತರು	ಸಮೀಕ್ಷೆ ನಂತರ ವಿತರಿಸಲಾದ ನಿವೇಶನಗಳು	ಪ್ರತಿಶತ ಸಾಧನೆ
ಗ್ರಾಮೀಣ ಪ್ರದೇಶ	1042986	23122	2.21

ಮೇಲೆ ಕೋಷ್ಟಕದಲ್ಲಿ ಕಾಣುವಂತೆ ತಮ್ಮ ಜಿಲ್ಲೆಯು ನಿವೇಶನ ಯೋಜನೆಯಡಿಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸದಿರುವುದು ಕಂಡು ಬರುತ್ತದೆ. ದಿನಾಂಕ 09.06.2009 ರಂದು ಮಾನ್ಯ ಮುಖ್ಯ ಮಂತ್ರಿಯವರು ಕೈಗೊಂಡ ಎಲ್ಲಾ ಜಿಲ್ಲಾಧಿಕಾರಿಗಳ ಹಾಗೂ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಿವೇಶನಗಳನ್ನು ವಿತರಿಸುವಲ್ಲಿ ಆಗಿರುವ ಕುಂಠಿತ ಪ್ರಗತಿ ಬಗ್ಗೆ ತಮ್ಮ ತೀವ್ರ ಅತೃಪ್ತಿ ವ್ಯಕ್ತಪಡಿಸಿರುತ್ತಾರೆ.

ಈ ಹಂತದಲ್ಲಿ ನಿವೇಶನ ಯೋಜನೆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುವ ಅವಶ್ಯಕತೆ ಇರುತ್ತದೆ. ಆದ್ದರಿಂದ ನಿಮ್ಮ ಜಿಲ್ಲೆಗೆ ಸಂಬಂಧಿಸಿದಂತೆ ಗ್ರಾಮೀಣ ನಿವೇಶನ ಯೋಜನೆಯಡಿಯಲ್ಲಿ 2009–10ನೇ ಆರ್ಥಿಕ ವರ್ಷದಲ್ಲಿ ಸಾಧಿಸಬೇಕಾದ ನಿವೇಶನ ಗುರಿಯನ್ನು ನಿಗದಿಪಡಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಕ್ರಮ ಕೈಗೊಳ್ಳುವುದು.

1. <u>ಅರ್ಹ ಫಲಾನುಭವಿಗಳ ಆಯ್ಕೆ :</u>
ಫಲಾನುಭವಿಗಳನ್ನು ಈಗಾಗಲೇ ತಯಾರಿಸಲಾದ ಆದ್ಯತೆ ಪಟ್ಟಿಯಿಂದಲೇ ಕ್ರಮವಾಗಿ ನೀಡಲಾದ ಗುರಿಗೆ ಅನುಗುಣವಾಗಿ ಗ್ರಾಮಸಭೆಗಳಲ್ಲಿ ಆಯ್ಕೆ ಮಾಡತಕ್ಕದ್ದು.

2. <u>ಮಹಿಳಾ ಫಲಾನುಭವಿಗಳು ಮಾತ್ರ :</u>
ಎಲ್ಲಾ ಫಲಾನುಭವಿಗಳು ಕಡ್ಡಾಯವಾಗಿ ಮಹಿಳೆಯರೇ ಆಗಿರಬೇಕು. (ಅಂಗವಿಕಲರು, ಮಾಜಿ ಸೈನಿಕರು, ವಿಧುರರು, ಹಿರಿಯ ನಾಗರಿಕರನ್ನು ಹೊರತುಪಡಿಸಿ)

3. <u>ನಿವೇಶನಗಳ ಮೀಸಲಾತಿ :</u>
ಈ ಕೆಳಗೆ ತಿಳಿಸಿದಂತೆ ಮೀಸಲಾತಿಯು ಅನ್ವಯವಾಗುತ್ತದೆ.

* ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ 40%, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 10% ಮತ್ತು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ 50% ಮೀಸಲಾತಿಯನ್ನು ನಿಗದಿಪಡಿಸಿದೆ.
* ಒಟ್ಟಾರೆ ನಿಗದಿಪಡಿಸಿದ ಗುರಿಯಲ್ಲಿ ಪ್ರತಿಶತ ಕನಿಷ್ಠ 5% ರಷ್ಟು ಅಂಗವಿಕಲರಿಗೆ ಮೀಸಲಾತಿ ನಿಗದಿಪಡಿಸಿದೆ.
* ಒಟ್ಟಾರೆ ನಿಗದಿಪಡಿಸಿದ ಗುರಿಯಲ್ಲಿ ಮಾಜಿ ಸೈನಿಕರಿಗೆ ಅಥವಾ ಸೈನಿಕರ ವಿಧವೆಯವರಿಗೆ ಮೀಸಲಾತಿ ಕನಿಷ್ಠ 1% ರಷ್ಟು ನಿಗದಿಪಡಿಸಿದೆ.
* ಗ್ರಾಮ ಪಂಚಾಯ್ತಿಗೆ ಒಟ್ಟಾರೆ ನಿಗದಿಪಡಿಸಿದ ಗುರಿಯಲ್ಲಿ ಹಿರಿಯ ನಾಗರಿಕರಿಗೆ ಮೀಸಲಾತಿ ಕನಿಷ್ಠ 2% ನಿಗದಿಪಡಿಸಿದೆ.
* ಅಂಗವಿಕಲರು, ಮಾಜಿ ಸೈನಿಕರು ಮತ್ತು ಹಿರಿಯ ನಾಗರಿಕರಿಗೆ ನಿಗದಿಪಡಿಸಿರುವ ಮೀಸಲಾತಿಗೆ ಫಲಾನುಭವಿಗಳು ಒಂದು ವೇಳೆ ಲಭ್ಯವಿಲ್ಲದಿದ್ದಲ್ಲಿ, ಸದರಿ ಫಲಾನುಭವಿಗಳು ಲಭ್ಯವಿಲ್ಲದಿರುವ ಬಗ್ಗೆ ನಿರ್ಣಯಿಸಿ ಠರಾವನ್ನು ಹೊರಡಿಸುವುದು.

4. <u>ಜಾಗೃತ ಸಮಿತಿ ಅನುಮೋದನೆ</u> (Vigilance Committee) :
ಮೇಲೆ ತಿಳಿಸಿರುವಂತೆ ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಿ ಸಾಮಾನ್ಯ ಸಭೆಯ ಅನುಮೋದನೆ ಪಡೆದ ನಂತರ ಸದರಿ ಪಟ್ಟಿಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರು ಜಾಗೃತ ಸಮಿತಿ (Vigilance Committee) ಮುಂದೆ ಇಟ್ಟು ಅನುಮೋದನೆ ಪಡೆಯಬೇಕು.

5. <u>ಪ್ರಗತಿ ವರದಿ :</u>
ನಿವೇಶನ ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿಯನ್ನು ಪ್ರತಿವಾರ ನಮೂನೆ–12ಎ ರಲ್ಲಿ ಇ–ಮೇಲ್ ಮೂಲಕ ಕಳುಹಿಸುವುದು

6. <u>ಈ ನಿವೇಶನ ಗುರಿಗೆ ಸಂಬಂಧಿಸಿದಂತೆ ಪ್ರಗತಿಯನ್ನು ಸಾಧಿಸಲು ಈ ಕೆಳಗಿನಂತೆ ಕ್ರಮ ಕೈಗೊಳ್ಳುವುದು.</u>

* ಈ ಹಿಂದೆ ಸರ್ಕಾರದಿಂದ ನಿವೇಶನ ಯೋಜನೆಯಡಿಯಲ್ಲಿ ನಿವೇಶನ ರಚನೆಗಾಗಿ ಭೂಮಿಯನ್ನು ಹಂಚಿಕೆ ಮಾಡಿ ಏನಾದರು ಜಮೀನು ಉಳಿದಿದ್ದರೆ ಅಂತಹ ಜಮೀನಿನಲ್ಲಿ ನಿವೇಶನಗಳನ್ನು ರಚನೆ ಮಾಡಿ ನಿವೇಶನ ರಹಿತರಿಗೆ ನಿವೇಶನ ಕಲ್ಪಿಸಲು ಕ್ರಮ ಕೈಗೊಳ್ಳುವುದು.
* ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸರ್ಕಾರಿ ಅಥವಾ ಸಮುದಾಯದ ಜಮೀನು ಇದ್ದು ಒತ್ತುವರಿಯಾಗಿದ್ದಲ್ಲಿ ಅಂತಹ ಒತ್ತುವರಿ ಸ್ಥಳವನ್ನು ಖಾಲಿ ಮಾಡಿಸಿ ಅದನ್ನು ಆಶ್ರಯ ವಸತಿ ನಿವೇಶನ ಯೋಜನೆಯಡಿಯಲ್ಲಿ ನಿವೇಶನಗಳನ್ನು ಹಂಚುವುದಕ್ಕಾಗಿ ಉಪಯೋಗಿಸಿಕೊಳ್ಳುವುದು.
* ನಿಗಮದಿಂದ ಈಗಾಗಲೇ ನಿಮ್ಮ ಜಿಲ್ಲೆಗೆ ಸಂಬಂಧಿಸಿದಂತೆ ಜಮೀನು ಖರೀದಿಸಲು ಅನುದಾನ ಬಿಡುಗಡೆ ಮಾಡಲಾಗಿದ್ದು, ಈ ಜಮೀನಿನಲ್ಲಿ ನಿವೇಶನಗಳನ್ನು ರಚಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡುವುದು.
* ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಸತಿಗೆ ಯೋಗ್ಯ ಸರ್ಕಾರಿ ಜಮೀನು ಲಭ್ಯವಿದ್ದಲ್ಲಿ ಅಂತಹ ಜಮೀನನ್ನು ನಿವೇಶನ ಯೋಜನೆಯಡಿಯಲ್ಲಿ ಹಂಚಿಕೆ ಮಾಡಲು ಕ್ರಮ ಕೈಗೊಳ್ಳುವುದು.
* ತಮ್ಮ ಜಿಲ್ಲೆಯಲ್ಲಿ ಈ ಮೇಲೆ ತಿಳಿಸಿದ ಸಂದರ್ಭಗಳಲ್ಲಿಯೂ ಕೂಡ ನಿವೇಶನ ಯೋಜನೆಯಡಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ಭೂಮಿ ಲಭ್ಯವಿಲ್ಲದ ಸಂದರ್ಭದಲ್ಲಿ ಖಾಸಗಿ ಜಮೀನನ್ನು ಮಾರ್ಗಸೂಚಿ ಬೆಲೆ + 100% ಗೆ ಖರೀದಿಸಲು ಅವಕಾಶವಿದ್ದು, ವಸತಿ ಯೋಗ್ಯವಾದ ಜಮೀನನ್ನು ಗುರ್ತಿಸಿ ನಮೂನೆ–11ಎ ರಲ್ಲಿ (ಪ್ರತಿ ಲಗತ್ತಿಸಿದೆ) ನಿಗಮಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ನಿಗಮದಿಂದ ಅನುದಾನ ಬಿಡುಗಡೆ ಮಾಡಲಾಗುವುದು.
* ಖಾಸಗಿ ಜಮೀನುಗಳನ್ನು ಮಾರ್ಗಸೂಚಿ ಬೆಲೆಯ ಅನುಸಾರ ಪರಿಶೀಲಿಸಿ ಖರೀದಿಸಲು ಸರ್ಕಾರದ ಪತ್ರ ಸಂಖ್ಯೆ ವಇ/57/ಹೆಚ್ಎಎಸ್/2007, ದಿನಾಂಕ : 04.08.2007 ರಲ್ಲಿ ಮಾರ್ಗಸೂಚಿ ಬೆಲೆಯ ಎರಡರಷ್ಟಕ್ಕೆ ಜಮೀನುಗಳನ್ನು ಖರೀದಿಸಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಅದರನ್ವಯ ಜಿಲ್ಲಾಧಿಕಾರಿಗಳ ಮೂಲಕ ನಿಗಮಕ್ಕೆ ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಜಮೀನು ಖರೀದಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಮಾರ್ಗಸೂಚಿ ಬೆಲೆಯ ಎರಡರಷ್ಟಕ್ಕೂ ಸಹ ಜಮೀನು ಲಭ್ಯವಿಲ್ಲದ ಸಂದರ್ಭದಲ್ಲಿಯು ಸಹ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಸರ್ಕಾರದಿಂದ ಅನುಮೋದನೆ ಪಡೆದು ಅನುದಾನ ಬಿಡುಗಡೆ ಮಾಡಲಾಗುವುದು.
* ಒಂದು ವೇಳೆ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನ ಲಭ್ಯವಿಲ್ಲದ ಸಂದರ್ಭದಲ್ಲಿ ಸರ್ಕಾರದಿಂದ ನೀಡಲಾಗುವ ಅನುದಾನದ ಜೊತೆಗೆ ಹೆಚ್ಚುವರಿಯಾಗಿ ಬೇಕಾದ ಅನುದಾನವನ್ನು ನಿವೇಶನ ಪಡೆಯುವ ಫಲಾನುಭವಿಗಳಿಂದ ಅಥವಾ ಸದರಿ ಬಡಾವಣೆಯಲ್ಲಿ ಲಭ್ಯವಾಗುವ ಮೂಲೆ ನಿವೇಶನಗಳು ಹಾಗೂ ವಾಣಿಜ್ಯ ನಿವೇಶನಗಳನ್ನು ಬಹಿರಂಗವಾಗಿ ಹರಾಜು ಹಾಕಿ ಫಲಾನುಭವಿಯಿಂದ ವ್ಯತ್ಯಾಸದ ಹಣಭರಿಸಿ ಅದರಿಂದ ಬರುವ ಅನುದಾನದಿಂದ ಖಾಸಗಿ ಜಮೀನನ್ನು ಖರೀದಿಸಿ ನಿವೇಶನ ರಹಿತರಿಗೆ ನಿವೇಶನಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು. ಈ ವಿಧಾನವನ್ನು ಅಳವಡಿಸಿ ಅನೇಕ ಕಡೆಗಳಲ್ಲಿ ಈಗಾಗಲೇ ಜಮೀನು ಖರೀದಿಸಲಾಗಿರುತ್ತದೆ. (ಉದಾ:– ಚಿತ್ರದುರ್ಗ ಜಿಲ್ಲೆಯ ಕವಾಡಿಗರ ಹಟ್ಟಿ ಹಾಗೂ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿ ಗ್ರಾಮ)

ನಿಮ್ಮ ಜಿಲ್ಲೆ ಹಾಗೂ ತಾಲ್ಲೂಕಿಗೆ ನಿಗದಿಪಡಿಸಲಾದ ಕನಿಷ್ಠ ಗುರಿ ವಿವರಗಳನ್ನು ಅನುಬಂಧ "ಅ" ದಲ್ಲಿ ಲಗತ್ತಿಸಿದ್ದು, ಮೇಲೆ ತಿಳಿಸಿರುವಂತೆ ಕ್ರಮ ಕೈಗೊಂಡು ಗರಿಷ್ಠ ಮಟ್ಟದಲ್ಲಿ ಗುರಿಯನ್ನು ಸಾಧಿಸಿ ಪ್ರತಿವಾರ ನಮೂನೆ–12ಎ ರಲ್ಲಿ ಸಾಧಿಸಿದ ಪ್ರಗತಿಯ ವಿವರಗಳನ್ನು ನೀಡಲು ಕೋರಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ
ಸಹಿ/–
ಎಸ್.ಎಸ್. ಮಹಾದೇವ ಪ್ರಸಾದ್
ವ್ಯವಸ್ಥಾಪಕ ನಿರ್ದೇಶಕರು (ಪ್ರಭಾರ)

Rural House Sites Target - 2009-2010

Sl. No	District	Taluk	Sitless families as per 2003-Surver	2009-10 Target
1	2	3	4	5
1	Hassan	Alur	144	14
2	Hassan	Arkalgud	2600	249
3	Hassan	Arsikere	4866	467
4	Hassan	Belur	840	81
5	Hassan	Channarayapatna	3972	381
6	Hassan	Hassan	5480	525
7	Hassan	Hole Narsipur	1073	103
8	Hassan	Sakleshpur	1766	169
	Hassan Total		20741	1989

ಸಂಖ್ಯೆ : ಗ್ರಾಅಪ 153 ಗ್ರಾಪಂಅ 2009

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು ದಿನಾಂಕ :15–07–2009.

ಸುತ್ತೋಲೆ

ವಿಷಯ : ಗ್ರಾಮ ಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗಾಗಿ ಮೀಸಲಿಟ್ಟ ಅನುದಾನದ ಪೂರ್ಣ ಬಳಕೆ ಬಗ್ಗೆ.

*****

ಕರ್ನಾಟಕ ಸರ್ಕಾರವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಪಂಚಾಯತಿಗಳ ವಾರ್ಷಿಕ ಅನುದಾನದಲ್ಲಿ ಶೇ.25ರಷ್ಟು ಅನುದಾನವನ್ನು ಈ ಉದ್ದೇಶಕ್ಕಾಗಿಯೇ ಪ್ರತ್ಯೇಕವಾಗಿ ಮೀಸಲಿರಿಸಿದೆ. ಈ ಅನುದಾನವನ್ನು ಹಲವಾರು ಜಿಲ್ಲಾ/ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳು ಪೂರ್ಣವಾಗಿ ಬಳಸಿಕೊಳ್ಳದಿರುವುದು. ಸರ್ಕಾರದ ಗಮನಕ್ಕೆ ಬಂದಿದೆ.

ಈ ಹಿನ್ನೆಲೆಯಲ್ಲಿ ತಮ್ಮ ಜಿಲ್ಲಾ ವ್ಯಾಪ್ತಿಯ ಎಲ್ಲ ಪಂಚಾಯತಿಗಳ ವಾರ್ಷಿಕ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಶೇ. 25ರ ಅನುದಾನವನ್ನು ಆಯಾ ವರ್ಷದಲ್ಲೇ ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಬೇಕೆಂದು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಈ ಮೂಲಕ ಸೂಚಿಸಲಾಗಿದೆ. ಈ ರೀತಿ ಅನುದಾನವನ್ನು ಬಳಸಿಕೊಳ್ಳಲು ವಿಫಲರಾದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಸಹ ಈ ಮೂಲಕ ಸೂಚಿಸಲಾಗಿದೆ.

ಸಹಿ/–
ಗೋವಿಂದರಾಜು
ನಿರ್ದೇಶಕರು (ಪಂ.ರಾಜ್) ಹಾಗೂ
ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

NREGA
राष्ट्रीय ग्रामीण रोजगार गारंटी अधिनियम

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ

ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ

2ನೇ ಮಹಡಿ 3ನೇ ಹಂತ, ಬಹುಮಹಡಿ ಕಟ್ಟಡ ಬೆಂಗಳೂರು– 560 001.

ದೂ. 080–22372738 E-mail: karnregs@gmail.com

ಸಂ: ಗ್ರಾಅಪ 59 ಉಖಾಯೋ 2009 Date: 07–10–2009

ರವರಿಗೆ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಜಿಲ್ಲಾ ಪಂಚಾಯತ್, ರಾಜ್ಯದ ಎಲ್ಲಾ ಜಿಲ್ಲೆಗಳು.

ಮಾನ್ಯರೆ,

ವಿಷಯ :– ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ತೋಟಗಾರಿಕಾ ಇಲಾಖೆಯು ತಯಾರಿಸಿರುವ ವಿವಿಧ ತೋಟಗಾರಿಕಾ ಬೆಳೆಗಳಿಗೆ ತಗಲುವ ಅಂದಾಜು ಬೇಸಾಯ ವೆಚ್ಚದ ವಿವರಗಳನ್ನು ಕಳುಹಿಸುತ್ತಿರುವ ಕುರಿತು.

ಉಲ್ಲೇಖ :– ನಿರ್ದೇಶಕರು, ತೋಟಗಾರಿಕೆ ಇಲಾಖೆ, ರವರ ಪತ್ರ ಸಂಖ್ಯೆ. ತೋಇ/ಯೋ/ಸತೋಅ–5/7–ಎ/2009–10 ದಿನಾಂಕ 05–09–2009

*****

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ವಿವಿಧ ಇಲಾಖೆಗಳ ಯೋಜನೆಗಳೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಅದರಂತೆ ತೋಟಗಾರಿಕೆ ಇಲಾಖೆಯು 2009–10 ನೇ ಸಾಲಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ವಿವಿಧ ತೋಟಗಾರಿಕಾ ಬೆಳೆಗಳಿಗೆ (ತೋಟದ ಬೆಳೆಗಳು ಮತ್ತು ಹಣ್ಣಿನ ಬೆಳೆಗಳು) ತಗಲುವ ಅಂದಾಜು ಬೇಸಾಯ ವೆಚ್ಚವನ್ನು ತಯಾರಿಸಲಾಗಿರುತ್ತದೆ. ಸದರಿ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಅದರನ್ವಯ ವಿವಿಧ ಯೋಜನೆಗಳನ್ನು ಒಗ್ಗೂಡಿಸಿ ತ್ವರಿತ ಗತಿಯಲ್ಲಿ ಜಾರಿಗೊಳಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕರ್ನಾಟಕ ಸರ್ಕಾರ
(ತೋಟಗಾರಿಕೆ ಇಲಾಖೆ)

ಸಂಖ್ಯೆ : ತೋಇ/ಯೋ/ಸತೋಅ–5/7.A/–/2009–10 ತೋಟಗಾರಿಕೆ ನಿರ್ದೇಶನಾಲಯ,
ಲಾಲ್‌ಬಾಗ್, ಬೆಂಗಳೂರು,
ದಿನಾಂಕ:25–09–2009.

ಸುತ್ತೋಲೆ

ವಿಷಯ : 2009–10ನೇ ಸಾಲಿನ NREGA ಯೋಜನೆಯನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ವಿವಿಧ ತೋಟಗಾರಿಕೆ ಬೆಳೆಗಳಿಗೆ ತಗಲುವ ಅಂದಾಜು ಬೇಸಾಯ ವೆಚ್ಚದ ವಿವರವನ್ನು ಕಳುಹಿಸುತ್ತಿರುವ ಬಗ್ಗೆ.

ಉಲ್ಲೇಖ : 1. ತೋಟಗಾರಿಕೆ ನಿರ್ದೇಶಕರವರ ಅಧ್ಯಕ್ಷತೆಯಲ್ಲಿ ದಿ : 02–09–09 ರಂದು ನಡೆದ NREGS ಸಭೆಯಲ್ಲಿ ಚರ್ಚಿಸಿದಂತೆ.

2. ದಿ : 23.07.09 ರಂದು ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು ಮತ್ತು ಪುಷ್ಪಾಭಿವೃದ್ಧಿ) ರವರ ಅಧ್ಯಕ್ಷತೆಯಲ್ಲಿ ನಡೆದ ತೋಟಗಾರಿಕೆ ಬಹುವಾರ್ಷಿಕ ಬೆಳೆಗಳ ಬೇಸಾಯ ವೆಚ್ಚ ಪರಿಷ್ಕರಿಸುವ ಬಗ್ಗೆ ನಡೆದ ಸಭೆಯ ನಡವಳಿಗಳು

3.ತೋಇ:ತೋಅನಿ:ಕ್ಷೇ/ಸ:ತಾಸ. 10:2009–10, ದಿ:01.09.2009.

*****

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ನೊಂದಾಯಿತ ಕೆಲಸಗಾರರ ಬೇಡಿಕೆಗನುಗುಣವಾಗಿ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ, ಅವರ ಜೀವನಕ್ಕೆ ಭದ್ರತೆ ನೀಡುವುದು ಮತ್ತು ದೀರ್ಘ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಹಾಗೂ ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಬಲಪಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

2007–08ನೇ ಸಾಲಿನ ಕರ್ನಾಟಕ ರಾಜ್ಯದ ತೋಟಗಾರಿಕೆ ಬೆಳೆಗಳ ಅಂಕಿ ಅಂಶಗಳನ್ವಯ ರಾಜ್ಯದ ನಿವ್ವಳ ಸಾಗುವಳಿ ಪ್ರದೇಶದಲ್ಲಿ ಶೇ. 16.93 ತೋಟಗಾರಿಕೆ ಬೆಳೆಗಳ ವಿಸ್ತೀರ್ಣವಿದ್ದು, ತೋಟಗಾರಿಕೆಯಲ್ಲಿ NREGS ಯೋಜನೆಯ ಮಹತ್ವ ಅಧಿಕವಾಗಿರುತ್ತದೆ. ಕಳೆದ ಒಂದು ದಶಕದಿಂದ ಪ್ರದೇಶ ವಿಸ್ತರಣೆಗೆ ಹಾಗೂ ಕ್ಷೇತ್ರ ಮತ್ತು ನರ್ಸರಿಗೆ ಹೆಚ್ಚಿನ ಅನುದಾನದ ಲಭ್ಯತೆ ಇರಲಿಲ್ಲವಾದ್ದರಿಂದ ನಿರ್ವಹಣೆಯು ಕಷ್ಟಸಾಧ್ಯವಾಗುತ್ತಿತ್ತು. NREGS ಯೋಜನೆಯ ಅನುಷ್ಠಾನದಿಂದ ಪ್ರದೇಶ ವಿಸ್ತರಣೆ ಮತ್ತು ಕ್ಷೇತ್ರ ಮತ್ತು ನರ್ಸರಿ ನಿರ್ವಹಣೆಯನ್ನು ಹೆಚ್ಚಿನ ಮಟ್ಟದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಬಹುದಾಗಿರುತ್ತದೆ. ಅಲ್ಲದೇ, ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಇತರೆ ಯೋಜನೆಗಳನ್ನು NREGS ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸುವುದರಿಂದ, ಇಲಾಖೆಗೆ ರಾಜ್ಯ ಸರ್ಕಾರದಿಂದ ಬರುವ ಆಯವ್ಯಯದ ಜೊತೆಗೆ ಕೇಂದ್ರ ಸರ್ಕಾರದ (NREGS) ಅನುದಾನವನ್ನು ಸಹ ಪಡೆದುಕೊಂಡು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ಇದರಿಂದ, ತೋಟಗಾರಿಕೆಯ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವುದರ ಜೊತೆಗೆ ರೈತರ ಆರ್ಥಿಕ ಸ್ಥಿತಿಯನ್ನು ಸಹ ಉತ್ತಮಪಡಿಸಬಹುದಾಗಿರುತ್ತದೆ.

ದಿನಾಂಕ :23.07.2009 ರಂದು ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು ಮತ್ತು ಪುಷ್ಪಾಭಿವೃದ್ಧಿ) ರವರ ಅಧ್ಯಕ್ಷತೆಯಲ್ಲಿ (ಕೃಷಿ ವಿಶ್ವವಿದ್ಯಾನಿಲಯ GKVK, IIHR ಮತ್ತು NHB ತಜ್ಞರೊಂದಿಗೆ) ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಬೇಸಾಯ ವೆಚ್ಚ ಪರಿಷ್ಕರಿಸುವ ಬಗ್ಗೆ ನಡೆದ ಸಭೆಯಲ್ಲಿ ನಿರ್ಣಯಿಸಿದಂತೆ ತಯಾರಿಸಲಾಗಿರುವ ಅಂದಾಜು ಬೇಸಾಯ ವೆಚ್ಚವನ್ನು ಆಧರಿಸಿ, 2009–10ನೇ ಸಾಲಿಗೆ NREGA ಯೋಜನೆಯನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ವಿವಿಧ

ತೋಟಗಾರಿಕೆ ಬೆಳೆಗಳಿಗೆ (ತೋಟದ ಬೆಳೆಗಳು ಮತ್ತು ಹಣ್ಣಿನ ಬೆಳೆಗಳು) ತಗಲುವ ಅಂದಾಜು ಬೇಸಾಯ ವೆಚ್ಚವನ್ನು ತಯಾರಿಸಲಾಗಿರುತ್ತದೆ.

ಮುಂದುವರೆದು, NREGA ಯೋಜನೆಯನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ವಿವಿಧ ತೋಟಗಾರಿಕೆ ಬೆಳೆಗಳಿಗೆ ತಗಲುವ ಅಂದಾಜು ಬೇಸಾಯ ವೆಚ್ಚದ ವಿವರದ ಬಗ್ಗೆ ಚರ್ಚಿಸಲು ದಿನಾಂಕ : 02–09–2009 ರಂದು ತೋಟಗಾರಿಕೆ ನಿರ್ದೇಶಕರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೈಗೊಂಡ ನಿರ್ಣಯದನ್ವಯ ಹಾಗೂ ಉಲ್ಲೇಖ (3) ರನ್ವಯ ಅಂದಾಜು ಬೇಸಾಯ ವೆಚ್ಚದ ವಿವರವನ್ನು ತಯಾರಿಸಲಾಗಿರುತ್ತದೆ. ಅಲದೇ, ಹನಿ ನೀರಾವರಿ ಯೋಜನೆಯಡಿ PVC ಪೈಪ್ ಲೈನ್ ಅಳವಡಿಸಲು ಗುಂಡಿ ಮತ್ತು ಕಾಲುವೆ ತೆಗೆಯುವ ಕೆಲಸಗಳಿಗೆ ತಗಲುವ ಅಂದಾಜು ವೆಚ್ಚವನ್ನು ಸಹ ತಯಾರಿಸಲಾಗಿದ್ದು, ಸದರಿ ಮಾಹಿತಿಯನ್ನು ಈ ಪತ್ರಕ್ಕೆ ಲಗತ್ತಿಸಿ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ. ಈ ಸುತ್ತೋಲೆ ದಿನಾಂಕ: 01.10.2009 ರಿಂದ ಜಾರಿಗೆ ಬರುತ್ತದೆ.

2009–10ನೇ ಸಾಲಿಗೆ ಈಗಾಗಲೇ ಕ್ರಿಯಾ ಯೋಜನೆಯು ಅನುಮೋದನೆಗೊಂಡಿದ್ದರೆ, ಅದರ ಪ್ರಕಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಈಗಾಗಲೇ ಸಿದ್ದಪಡಿಸಿದ ಅಂದಾಜು ವೆಚ್ಚದಲ್ಲಿ ಯಾವುದೇ ಬದಲಾವಣೆ ಅವಶ್ಯವಿರುವುದಿಲ್ಲ.

ಅಂದಾಜು ಬೇಸಾಯ ವೆಚ್ಚದಲ್ಲಿ ನಮೂದಿಸಲಾಗಿರುವ ಬೆಳೆಗಳನ್ನು ಬಿಟ್ಟು ಇತರೆ ಬೆಳೆಗಳಿಗೆ / ಕಾರ್ಯಕ್ರಮಗಳಿಗೆ NREGA ಯೋಜನೆಯನ್ನು ಅಳವಡಿಸಿ ಅನುಷ್ಠಾನಗೊಳಿಸುವುದಾದರೆ, NREGA ದರಪಟ್ಟಿಯನ್ವಯ ಮತ್ತು ಯಾವ ಕಾರ್ಯಕ್ರಮಗಳಿಗೆ NREGA ದರಪಟ್ಟಿ ಲಭ್ಯವಿಲ್ಲವೋ ಅಂತಹ ಕಾರ್ಯಕ್ರಮಗಳನ್ನು ಇಲಾಖೆಯು SR ದರಪಟ್ಟಿಯನ್ವಯ ತಯಾರಿಸುವುದು ಮತ್ತು ಯಾವುದೇ ದರಪಟ್ಟಿ ಇಲ್ಲದ ಕಾಮಗಾರಿಗಳಿಗೆ ಜಿಲ್ಲೆಯಲ್ಲಿರುವ ತೋಟಗಾರಿಕೆ ತಂತ್ರಜ್ಞರೊಡನೆ (ಕೃಷಿ ವಿಜ್ಞಾನ ಕೇಂದ್ರ / ತೋಟಗಾರಿಕೆ ವಿಶ್ವವಿದ್ಯಾಲಯ) ಚರ್ಚಿಸಿ, ಅಂದಾಜು ಬೇಸಾಯ ವೆಚ್ಚವನ್ನು ನಿಗದಿಪಡಿಸಿಕೊಂಡು ಜಿಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಂದ ಅನುಮೋದನೆಯನ್ನು ಪಡೆದು ಅನುಷ್ಠಾನಗೊಳಿಸುವುದು ಹಾಗೂ ಅಳವಡಿಸಿಕೊಂಡು ಕಾರ್ಯಕ್ರಮಗಳ ಬಗ್ಗೆ ವರದಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವುದು.
ಮುಂದುವರೆದು, ಪ್ರತಿ ಗ್ರಾಮದಲ್ಲಿ ಕನಿಷ್ಠ 100 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಇಲಾಖೆ ಕಾರ್ಯಕ್ರಮಗಳನ್ನು 2009–10 ನೇ ಸಾಲಿನಲ್ಲಿ NREGS ಯೋಜನೆಯಡಿ ಕಡ್ಡಾಯವಾಗಿ ಅನುಷ್ಠಾನ ಗೊಳಿಸಲು ಸೂಚಿಸಿದೆ.

ಪ್ರತಿ ಜಿಲ್ಲೆಗೆ ಫಲಾನುಭವಿ ಆಧಾರಿತ ಹಾಗೂ ಕ್ಷೇತ್ರಗಳಲ್ಲಿ ನರ್ಸರಿಗಳ ಕಾಮಗಾರಿಗಳಿಗೆ ಪ್ರತ್ಯೇಕ ಕ್ರಿಯಾ ಯೋಜನೆಗಳನ್ನು NREGS ಮಾರ್ಗಸೂಚಿಯನ್ವಯ ರೂಪಿಸಿ, ಅದರ ಪ್ರತಿಯನ್ನು ನಿರ್ದೇಶನಾಲಯಕ್ಕೆ ಮಾಹಿತಿಗೆ ತಪ್ಪದೇ ಕಳುಹಿಸುವುದು ಹಾಗೂ ಈ ಕ್ರಿಯಾ ಯೋಜನೆಗಳಿಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ಈ ಮೂಲಕ ಸೂಚಿಸಿದೆ. ಅಲ್ಲದೇ, ಪ್ರಗತಿ ವರದಿಯನ್ನು ಈ ಪತ್ರಕ್ಕೆ ಲಗತ್ತಿಸಿದ ನಮೂನೆಯಲ್ಲಿ ಪ್ರತಿ ಮಾಹೆಯ 2ನೇ ತಾರೀಖಿನೊಳಗೆ ನಿರ್ದೇಶನಾಲಕ್ಕೆ ತಪ್ಪದೇ ಸಲ್ಲಿಸಲು ಸೂಚಿಸಿದೆ.

ಸಹಿ/–
ತೋಟಗಾರಿಕೆ ನಿರ್ದೇಶಕರು

ನಿಮ್ಮ ಅಲೆಮಾರಿ ಚಿಂತನೆಗಳ ಮೇಲೆ ಹಿಡಿತ ಸಾಧಿಸಿ, ಬದುಕಿನ ಏರಿಳಿತಗಳಿಂದ
ಔನ್ನತ್ಯಕ್ಕೇರಲು ಪ್ರಯತ್ನಿಸಿ, ಆಗ ಸಾಧನೆಗೆ ಅಡ್ಡಿಯಾದ ಎಲ್ಲ ಆತಂಕಗಳೂ
ಮರೆಯಾಗುವುದನ್ನು ಕಾಣುವಿರಿ.
– ಆನಂದ ಮಹಿಮಾ

ಟಿಪ್ಪಣಿ

1997–98 ರಲ್ಲಿ ತಯಾರಿಸಿದ ಬೆಳೆಗಳ ಬೇಸಾಯದ ವೆಚ್ಚದ ಮಾಹಿತಿಯನ್ನು ಇಲಾಖೆಯಿಂದ ಸಿದ್ಧಪಡಿಸಲಾಗಿದೆ. ಇಲಾಖೆಯ ಎಸ್.ಆರ್. ದರಪಟ್ಟಿ, ಎನ್.ಆರ್.ಇ.ಜಿ.ಎಸ್. ದರಪಟ್ಟಿಗಳನ್ವಯ ಹಾಗೂ ಎಸ್.ಆರ್. ದರಪಟ್ಟಿಯಲ್ಲಿ ಇರದ ಕಾರ್ಯಕ್ರಮಗಳಿಗೆ ಸ್ಥಳೀಯವಾಗಿ ಅನುಸರಿಸುತ್ತಿರುವ ದರಗಳನ್ವಯ ಬೇಸಾಯ ವೆಚ್ಚದ ವಿವರಗಳು 2009 ರಲ್ಲಿ ತಯಾರಿಸಿದ ವೆಚ್ಚವು ಈ ಕೆಳಕಂಡಂತಿವೆ.

Comparative statement of Cost of Cultivation during 1997 and 2009

ಕ್ರ ಸಂ.	ಕಾರ್ಯಕ್ರಮಗಳು	1997	2009
1	ಕೂಲಿ ವೆಚ್ಚ (ಎನ್.ಆರ್.ಇ.ಜಿ.ಎಸ್. ದರದನ್ವಯ)	30/Manday	82 - 125 / Manday (Based on location)
2	Nitrogen (ಮಾರುಕಟ್ಟೆ ದರದನ್ವಯ)*Urea Rs 268/50Kg bag	7.72/Kg	11.67/Kg
3	Phosphrous (ಮಾರುಕಟ್ಟೆ ದರದನ್ವಯ)* SSP Rs 180/50 Kg bag	18.31/Kg	22.50/Kg
4	Potash (ಮಾರುಕಟ್ಟೆ ದರದನ್ವಯ)* MOP Rs 232/50 Kg bag	7.18/Kg	7.73/Kg
5	FYM (ಸ್ಥಳೀಯ ದರದನ್ವಯ)	200/ton	3000/ton
6	ಅಂತರ ಬೇಸಾಯ ಟ್ರಾಕ್ಟರ್‌ನಿಂದ (ಎಸ್.ಆರ್. ಅನ್ವಯ)	150/acre	1200/acre
7	ಕಸಿ/ಸಸಿಗಳ ವೆಚ್ಚ (Eg : Mango) (ಅನುಮೋದಿತ ಇಲಾಖೆಯ ದರಪಟ್ಟಿಯನ್ವಯ)	20/Plant	25/plant
8	ಭೂಮಿ ಸಿದ್ಧತೆ ಟ್ರಾಕ್ಟರ್‌ನಿಂದ (ಎಸ್.ಆರ್. ಅನ್ವಯ)	500/acre	3200/Acre
9	ಗುಂಡಿ ತೆಗೆಯುವುದು (1 cubic mt) (ಎಸ್.ಆರ್. ಅನ್ವಯ)	14/pit	78/pit
10	ಗಿಡ ನೆಡುವುದು + ಆಧಾರ ಕೋಲು ಕಟ್ಟುವುದು. (ಎಸ್.ಆರ್. ಅನ್ವಯ)	2.85/plant	12/plant
11	ಸಸ್ಯ ಸಂರಕ್ಷಣಾ ಔಷಧಿ (ಮಾರುಕಟ್ಟೆ ದರದನ್ವಯ)		
	ಕಾಪರ್ ಸಲ್ಫೇಟ್	45-50/Kg	160/Kg
	ಕಾಪರ್ ಆಕ್ಸಿ ಕ್ಲೋರೇಡ್	150/Kg	420/Kg
	ಸಲ್ಫರ್	40/Kg	190/Kg
	DM–45 (ಮ್ಯಾಕೊಂಜೆಬ್)	150/Kg	380/Kg

ವಿವಿಧ ತೋಟದ ಬೆಳೆಗಳಡಿ ಪ್ರಸ್ತಾಪಿಸಿರುವ ಬೆಳೆವಾರು ಅಂದಾಜು ಬೇಸಾಯ ವೆಚ್ಚ.

ಒಂದು ಹೆಕ್ಟೇರ್ ಶುಂಠಿ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ತಗಲುವ ಅಂದಾಜು ಬೇಸಾಯ ವೆಚ್ಚ

ಇಲಾಖೆ : ತೋಟಗಾರಿಕೆ
ಶಾಖೆ : ಯೋಜನಾ ವಿಭಾಗ
ಬಿತ್ತನೆ ಕೊಂಬುಗಳು: 1,500 ಕೆ.ಜಿ/ಹೆ

(ರೂ.ಗಳಲ್ಲಿ)

ಕ್ರ ಸಂ.	ಕಾರ್ಯಕ್ರಮವಾರು ವಿವರಗಳು	ಘಟಕ ವೆಚ್ಚ (ರೂ)	ಕೂಲಿ ವೆಚ್ಚ	ಸಾಮಗ್ರಿ ವೆಚ್ಚ	ಒಟ್ಟು ವೆಚ್ಚ	ಸಾಮಗ್ರಿ ವೆಚ್ಚ	ಒಟ್ಟು ವೆಚ್ಚ	ಪರಾ
			NREGS			ರೈತರು ಭರಿಸ ಬೇಕಾಗಿರುವ ಮೊತ್ತ	NREGS+ Farmers	
1	ಭೂಮಿಯನ್ನು ಸಿದ್ಧಪಡಿಸುವುದು	0.56/ಚ.ಮೀ	5625.00		5625.00		5625.00	
2	ಬೀಜ ಸಾಮಗ್ರಿ (Rhizome)	10.00/ಕೆ.ಜಿ		3880.00	3880.00	11120.00	15000.00	
3	ಮಣ್ಣು, ಮರಳು ಮತ್ತು ಇತರೆ ಸಾಮಗ್ರಿ ವೆಚ್ಚ	25.00/ಸಾಲಿಗೆ		2775.00	2775.00		2775.00	
4	ಬಿತ್ತನೆ ಮಾಡುವುದು	20.00/ ಸಾಲಿಗೆ	2220.00		2220.00		2220.00	
5	ರಾಸಾಯನಿಕ, ಕೊಟ್ಟಿಗೆ ಗೊಬ್ಬರ, ಸಾವಯವ ಗೊಬ್ಬರ, ಸಸ್ಯ/ಬೀಜೋಪಚಾರ, ಸಸ್ಯ ಸಂರಕ್ಷಣಾ ಔಷಧಿ ಹಾಗೂ ಇತ್ಯಾದಿ					10000.00	10000.00	100:50:50 gms/plant NPK, 25 ಟನ್ Fym/ha
6	ಸಾವಯವ ಗೊಬ್ಬರ ಮತ್ತು ರಸಗೊಬ್ಬರ ನೀಡುವುದು	20.00/ ಸಾಲಿಗೆ	2220.00		2220.00		2220.00	
7	ಕಳೆ ತೆಗೆಯುವುದು (ವರ್ಷಕ್ಕೆ 4 ಬಾರಿ)					5600.00	5600.00	
8	ಕೊಯ್ಲಿಗೆ ತಗಲುವ ವೆಚ್ಚ		10000.00		10000.00		10000.00	
			20065.00	6655.00	26720.00	26720.00	53440.00	
			75.09	24.91				

ಸೂಚನೆ : 1. ಮೇಲೆ ನಮೂದಿಸಲಾಗಿರುವ ಕಾರ್ಯಕ್ರಮಗಳಲ್ಲಿ ಫಲಾನುಭವಿಯು ಅನುಷ್ಠಾನಗೊಳಿಸದಿರುವ ಕಾರ್ಯಕ್ರಮವನ್ನು ಬೇಸಾಯ ವೆಚ್ಚದಿಂದ ಕಡಿತಗೊಳಿಸುವುದು ಹಾಗೂ ಸಹಿ ಬಗ್ಗೆ ದೃಢೀಕರಣಗೊಳಿಸುವುದು. ಅಲ್ಲದೇ, ಎಲ್ಲಾ ಕಾಮಗಾರಿಗಳ ಅನುಷ್ಠಾನ ಪೂರ್ವ ಮತ್ತು ಅನುಷ್ಠಾನ ನಂತರ ದೃಢೀಕರಣಗೊಳಿಸುವುದು ಮತ್ತು NREGS ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು.

2. ಅಂದಾಜು ಬೇಸಾಯ ವೆಚ್ಚದ ವಿವರವು **monocropping** ಗೆ ತಯಾರಿಸಲಾಗಿದ್ದು, **monocropping** ಇರುವಲ್ಲಿ ಮಾತ್ರ ಮೇಲಿನ ಅಂದಾಜು ಬೇಸಾಯ ವೆಚ್ಚದ ವಿವರವು ಅನ್ವಯಿಸುತ್ತದೆ. ಅಂತರಬೆಳೆ/ಮಿಶ್ರಬೆಳೆ ಇದ್ದಲ್ಲಿ, ಶುಂಠಿ ಬೆಳೆ ಪ್ರದೇಶ **Cover** ಆಗಿರುವುದನ್ನು ಮಾತ್ರ ಪರಿಗಣಿಸುವುದು.

ಒಂದು ಹೆಕ್ಟೇರ್ ಅಡಿಕೆ ತೋಟವನ್ನು ಅಭಿವೃದ್ಧಿ ಪಡಿಸಲು ತಗಲುವ ಅಂದಾಜು ವೆಚ್ಚ

ಇಲಾಖೆ : ತೋಟಗಾರಿಕೆ
ಶಾಖೆ : ಯೋಜನಾ ವಿಭಾಗ

ಅಂತರ : 2.7x2.7 ಮೀ
ಗಿಡಗಳ ಸಂಖ್ಯೆ : 1370

(ರೂ.ಗಳಲ್ಲಿ)

ಕ್ರ ಸಂ.	ಕಾರ್ಯಕ್ರಮವಾರು ವಿವರಗಳು	ಘಟಕ ವೆಚ್ಚ (ರೂ)	ಕೂಲಿ ವೆಚ್ಚ	ಸಾಮಗ್ರಿ ವೆಚ್ಚ	ಒಟ್ಟು ವೆಚ್ಚ	ರೈತರು ಭರಿಸ ಬೇಕಾಗಿರುವ ಮೊತ್ತ	ಒಟ್ಟು ವೆಚ್ಚ	ಷರಾ
			NREGS			Farmers	NREGS+ FARMERS	
1	ಭೂಮಿಯನ್ನು ಸಿದ್ಧಪಡಿಸುವುದು	0.8/ಚ.ಮೀ	6000.00		6000.00	2000	8000.00	
2	ಗುಂಡಿ ತೆಗೆಯುವುದು	2.00/ ಗುಂಡಿಗೆ	2740.00		2740.00		2740.00	
3	ಗಿಡಗಳ ವೆಚ್ಚ	12.00/ಗಿಡ		13400.00	13400.00	3000.00	16400.00	
4	ಮಣ್ಣು, ಮರಳು ಮತ್ತು ಇತರೆ ಸಾಮಗ್ರಿ ವೆಚ್ಚ	20.00/ ಯೂನಿಟ್				8000.00	8000.00	
5	ಗಿಡ ನೆಡುವುದು	2.00/ಗಿಡ	2740.00		2740.00		2740.00	
6	ರಾಸಾಯನಿಕ, ಕೊಟ್ಟಿಗೆ ಗೊಬ್ಬರ, ಸಾವಯವ ಗೊಬ್ಬರ, ಸಸ್ಯ/ ಬೀಜೋಪಚಾರ, ಸಸ್ಯ ಸಂರಕ್ಷಣಾ ಔಷಧಿ ಹಾಗೂ ಇತ್ಯಾದಿ					20000.00	20000.00	100:40:140 gms/plant NPK, 2.5 ಟನ್ FYM/ha
7	ಸಾವಯವ ಗೊಬ್ಬರ ಮತ್ತು ರಸಗೊಬ್ಬರ ನೀಡುವುದು ಹಾಕಿ ಮುಚ್ಚುವುದು.	2.32/ಗಿಡ	3178.00		3178.00		3178.00	
8	ಕಳೆ ತೆಗೆಯುವುದು (ವರ್ಷಕ್ಕೆ 4 ಬಾರಿ)		5600.00		5600.00		5600.00	
9	ಅಂತರ ಬೇಸಾಯ	1200/ಎಕರೆ				3000.00	3000.00	
			20258.00	13400.00	33658.00	36000.00	69658.00	
			60.19	39.81				

ಸೂಚನೆ : 1. ಮೇಲೆ ನಮೂದಿಸಲಾಗಿರುವ ಕಾರ್ಯಕ್ರಮಗಳಲ್ಲಿ ಫಲಾನುಭವಿಯು ಅನುಷ್ಠಾನಗೊಳಿಸದಿರುವ ಕಾರ್ಯಕ್ರಮವನ್ನು ಬೇಸಾಯ ವೆಚ್ಚದಿಂದ ಕಡಿತಗೊಳಿಸುವುದು ಹಾಗೂ ಈ ಬಗ್ಗೆ ದೃಢೀಕರಣಗೊಳಿಸುವುದು. ಅಲ್ಲದೇ, ಎಲ್ಲಾ ಕಾಮಗಾರಿಗಳ ಅನುಷ್ಠಾನ ಪೂರ್ವ ಮತ್ತು ಅನುಷ್ಠಾನ ನಂತರ ದೃಢೀಕರಣಗೊಳಿಸುವುದು ಮತ್ತು NREGS ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು.

2. ಅಂದಾಜು ಬೇಸಾಯ ವೆಚ್ಚದ ವಿವರವು **monocropping** ಗೆ ತಯಾರಿಸಲಾಗಿದ್ದು, **monocropping** ಇರುವಲ್ಲಿ ಮಾತ್ರ ಮೇಲಿನ ಅಂದಾಜು ಬೇಸಾಯ ವೆಚ್ಚದ ವಿವರವು ಅನ್ವಯಿಸುತ್ತದೆ. ಅಂತರಬೆಳೆ/ಮಿಶ್ರಬೆಳೆ ಇದ್ದಲ್ಲಿ, ಅಡಿಕೆ ಬೆಳೆ ಪ್ರದೇಶ **cover** ಆಗಿರುವುದನ್ನು ಮಾತ್ರ ಪರಿಗಣಿಸುವುದು.

5. ಒಂದು ಹೆಕ್ಟೇರ್ ತೆಂಗಿನ ತೋಟವನ್ನು ಅಭಿವೃದ್ಧಿ ಪಡಿಸಲು ತಗಲುವ ಅಂದಾಜು ವೆಚ್ಚ

ಇಲಾಖೆ : ತೋಟಗಾರಿಕೆ ಶಾಖೆ : ಯೋಜನಾ ವಿಭಾಗ

ಅಂತರ : 9x9 ಮೀ ಗಿಡಗಳ ಸಂಖ್ಯೆ : 150 (ರೂ.ಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮವಾರು ವಿವರಗಳು	ಘಟಕ ವೆಚ್ಚ (ರೂ)	ಕೂಲಿ ವೆಚ್ಚ	ಸಾಮಗ್ರಿ ವೆಚ್ಚ	ಒಟ್ಟು ವೆಚ್ಚ	ಕೂಲಿ ವೆಚ್ಚ	ಸಾಮಗ್ರಿ ವೆಚ್ಚ	ರೈತರು ಭರಿಸ ಬೇಕಾಗಿರುವ ಮೊತ್ತ	ಒಟ್ಟು ವೆಚ್ಚ	ಷರಾ
			NREGS			CDB		Farmers	NREGS+ FARMERS + CDB	
1	ಭೂಮಿಯನ್ನು ಸಿದ್ಧಪಡಿಸುವುದು	0.8/ಚ.ಮೀ	4000.00		4000.00			4000.00	8000.00	
2	ಗುಂಡಿ ತೆಗೆಯುವುದು	52.00/ ಗುಂಡಿಗೆ	7800.00		7800.00				7800.00	
3	ಗಿಡಗಳ ವೆಚ್ಚ	25.00/ಗಿಡ		3750.00	3750.00				3750.00	
4	ಮಣ್ಣು, ಮರಳು ಮತ್ತು ಇತರೆ ಸಾಮಗ್ರಿವೆಚ್ಚ			3600.00	3600.00				3600.00	
5	ಗಿಡ ನೆಡುವುದು	6.00/ಗಿಡ	900.00		900.00				900.00	
6	ರಾಸಾಯನಿಕ, ಕೊಟ್ಟಿಗೆ ಗೊಬ್ಬರ, ಸಾವಯವ ಗೊಬ್ಬರ, ಸಸ್ಯ/ಬೀಜೋಪಚಾರ, ಸಸ್ಯ ಸಂರಕ್ಷಣಾ ಔಷಧಿ ಹಾಗೂ ಇತ್ಯಾದಿ						1.1500.00 (Basin preparation 1.2mt width x 45 CM depth) Rs. 10/Basin) 2. Catch pits (0.9x0.9x0.9 Mts) Rs. 5413.003. Preparation of trenches for soil and water conservation (4mtx15cmx60cm) Rs.4.79/Trench Rs. 95.80	2991.20	10000.00	50:40:11 5gms/ plant NPK, 3.00 ಟನ್ FYM/ha
7	ಸಾವಯವ ಗೊಬ್ಬರ ಮತ್ತು ರಸಗೊಬ್ಬರ ನೀಡುವುದು	2.32/ಗಿಡ	348.00		348.00				348.00	
8	ಕಳೆ ತೆಗೆಯುವುದು (ವರ್ಷಕ್ಕೆ 4 ಬಾರಿ)					1stRs. 910.2/Ha		3945.10	5600.00	
9	ಅಂತರ ಬೇಸಾಯ	1200/ಎಕರೆ	3000.00		3000.00				3000.00	
			16048.00	7350.00	23398.00	1654.90	7008.80	10936.30	42998.00	
			68.59	31.41						

ಸೂಚನೆ : 1. ಮೇಲೆ ನಮೂದಿಸಲಾಗಿರುವ ಕಾರ್ಯಕ್ರಮಗಳಲ್ಲಿ ಫಲಾನುಭವಿಯು ಅನುಷ್ಠಾನಗೊಳಿಸದಿರುವ ಕಾರ್ಯಕ್ರಮವನ್ನು ಬೇಸಾಯ ವೆಚ್ಚದಿಂದ ಕಡಿತಗೊಳಿಸುವುದು ಹಾಗೂ ಈ ಬಗ್ಗೆ ದೃಢೀಕರಣಗೊಳಿಸುವುದು. ಅಲ್ಲದೇ, ಎಲ್ಲಾ ಕಾಮಗಾರಿಗಳ ಅನುಷ್ಠಾನ ಪೂರ್ವ ಮತ್ತು ಅನುಷ್ಠಾನ ನಂತರ ದೃಢೀಕರಣಗೊಳಿಸುವುದು ಮತ್ತು NREGS ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು.

2. ಸಮಗ್ರ ತೆಂಗು ಬೇಸಾಯ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದಂತಹ ಜಿಲ್ಲೆಗಳಲ್ಲಿ ಸಮಗ್ರ ತೆಂಗು ಬೇಸಾಯ ಯೋಜನೆಯಡಿ ದೊರೆಯುವ ಸವಲತ್ತುಗಳನ್ನು ರೈತರು ಭರಿಸಬೇಕಾಗುವುದು.

3. ಅಂದಾಜು ಬೇಸಾಯ ವೆಚ್ಚದ ವಿವರವು monocropping ಗೆ ತಯಾರಿಸಲಾಗಿದ್ದು, monocropping ಇರುವಲ್ಲಿ ಮಾತ್ರ ಮೇಲಿನ ಅಂದಾಜು ಬೇಸಾಯ ವೆಚ್ಚದ ವಿವರವು ಅನ್ವಯಿಸುತ್ತದೆ. ಅಂತರಬೆಳೆ/ಮಿಶ್ರಬೆಳೆ ಇದ್ದಲ್ಲಿ, ತೆಂಗು ಪ್ರದೇಶ cover ಆಗಿರುವುದನ್ನು ಮಾತ್ರ ಪರಿಗಣಿಸುವುದು.

4. CDB ಪ್ರಯೋಜನೆಯನ್ನು ಪಡೆಯದಿರುವ ಫಲಾನುಭವಿಗಳು CDB ಯೋಜನೆಯಡಿ ಲಭ್ಯವಿರುವ ಅನುದಾನ ರೂ. 8663.70 ಗಳನ್ನು ರೈತರೇ ಭರಿಸುವುದು.

8. ಒಂದು ತೆಂಗು ಗಿಡ ಅಭಿವೃದ್ಧಿ ಪಡಿಸಲು ತಗಲುವ ಅಂದಾಜು ವೆಚ್ಚ

ತೆಂಗು (ಒಂದು ಗಿಡಕ್ಕೆ)

ಕ್ರ.ಸಂ.	ವಿವರ			ಒಂದು ಗಿಡಕ್ಕೆ	
		ಕೂಲಿ	ಕೂಲಿಯೇತರ	ಒಟ್ಟು ಮೊತ್ತ	ಮಾನವ ದಿನಗಳು
1	1*1*1 ಮೀ. ಅಳತೆಯಗುಂಡಿಗಳನ್ನು ಗಟ್ಟಿ ಮಣ್ಣಿನಲ್ಲಿ ತೋಡುವುದು ಹಾಗು ತೆಗೆದು 1/3 ಭಾಗ ಮೇಲ್ಮಣ್ಣು ಗುಣಿಯ ಮೇಲ್ಬದಿಗೆ ಮತ್ತು 2/3 ಭಾಗವನ್ನು ಗುಣಿಯ ಕೆಳಗಿನ ಜಾಗದಲ್ಲಿ ಹಾಕುವುದು @ 99 ರೂ/ಗುಣಿಗೆ	99	—	99	1.21
2	ಗುಂಡಿ ತೋಡಿರುವುದಕ್ಕೆ ಪ್ರತಿಶತ 90 ರಷ್ಟು ಮಣ್ಣನ್ನು ತುಂಬುವುದು @ 18/ ಗುಂಡಿ	18	—	18	0.22
3	ಸಾವಯವ ಗೊಬ್ಬರ ಮತ್ತು ಕ್ರಿಮಿನಾಶಕ ಖರೀದಿ	—	22	22	—
4	ಸಸಿ ಖರೀದಿ ಹಾಗು ಸಾಗಣೆಕೆ ವೆಚ್ಚ ಸೇರಿ @ 30/ಸಸಿ	—	30	30	—
5	ಮುಳ್ಳಿನ ಬೇಲಿ ಹಾಕುವುದು (ಸ್ಥಳೀಯವಾಗಿ ಸಿಗುವಂತಹ ಪರಿಕರಗಳನ್ನು ಉಪಯೋಗಿಸುವುದು)	21	—	21	0.26
6	ಆಡಳಿತಾತ್ಮಕ ವೆಚ್ಚ	—	10	10	—
	ಒಟ್ಟು	138	62	200	1.68

<u>ಸೂಚನೆ :</u> ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / BPL ಆಶ್ರಯ / IAY/ ನವಗ್ರಾಮ/ಜನತಾ/ ವಾಂಬೆ ಫಲಾನುಭವಿಗಳ ಮನೆ ಮುಂದೆ ಹಾಗೂ ಸರ್ಕಾರಿ – ಶಾಲೆ/ವಸತಿ ನಿಲಯ/ಕಾಲೇಜು/ ಗ್ರಾಮ ಪಂಚಾಯತ್/ಆಸ್ಪತ್ರೆ ಆವರಣ/ಉದ್ಯಾನವನಗಳಲ್ಲಿ ತೆಂಗು ಗಿಡಗಳನ್ನು ನೆಡಲು ಈ ವೆಚ್ಚ ಅನ್ವಯಿಸುತ್ತದೆ.

1 ಹೆಕ್ಟೇರ್ ಪ್ರದೇಶದಲ್ಲಿ ಮಾವು & ಸಪೋಟ ತೋಟವನ್ನು ಅಭಿವೃದ್ಧಿಪಡಿಸಲು ತಗಲುವ ಅಂದಾಜು ವೆಚ್ಚ

ಇಲಾಖೆ : ತೋಟಗಾರಿಕೆ ಶಾಖೆ : ಯೋಜನಾ ವಿಭಾಗ

ಬೆಳೆ : ಮಾವು & ಸಪೋಟ
ಅಂತರ : 10 x 10 ಮೀ, ಗಿಡಗಳ ಸಂಖ್ಯೆ : 100

(ರೂ.ಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮವಾರು ವಿವರಗಳು	ಘಟಕ ವೆಚ್ಚ (ರೂ)	ಕೂಲಿ ವೆಚ್ಚ	ಸಾಮಗ್ರಿ ವೆಚ್ಚ	ಒಟ್ಟು ವೆಚ್ಚ	ಕೂಲಿ ವೆಚ್ಚ	ಒಟ್ಟು ವೆಚ್ಚ	ಷರಾ
			NREGS			ರೈತರು ಭರಿಸ ಬೇಕಾಗಿರುವ ಮೊತ್ತ	NREGS+ FARMERS	
1	ಪೊದೆ ತೆಗೆದು ಭೂಮಿಯನ್ನು ಸಮತೋಲನ ಮಾಡುವುದು	0.8/ಚ.ಮೀ	6000.00		6000.00	2000.00	8000.00	
2	ಗುಂಡಿ ತೆಗೆಯುವುದು @ 0.90 ಘನ ಮೀ.	78.00/ ಗುಂಡಿ	7800.00		7800.00		7800.00	
3	ಗಿಡಗಳ ವೆಚ್ಚ – 100 ಗಿಡ	30.00/ಗಿಡ		3000.00	3000.00		3000.00	
4	ಆಧಾರ ಕಡ್ಡಿ – 100 ಸಂಖ್ಯೆ	2.40/ ಕಡ್ಡಿ			0.00	240.00	240.00	
5	ಮಣ್ಣು, ಮರಳು ಮತ್ತು ಇತರೆ ಸಾಮಗ್ರಿ ವೆಚ್ಚ	36.00/ ಯೂನಿಟ್		3000.00	3000.00	600.00	3600.00	
6	ಗಿಡ ನೆಡುವುದು + ಆಧಾರ ಕೋಲು ಕಟ್ಟುವುದು.	12.00/ ಗಿಡ	1200.00		1200.00		1200.00	
7	ರಾಸಾಯನಿಕ, ಕೊಟ್ಟಿಗೆ ಗೊಬ್ಬರ, ಸಾವಯವ ಗೊಬ್ಬರ, ಸಸ್ಯ/ಬೀಜೋಪಚಾರ, ಸಸ್ಯ ಸಂರಕ್ಷಣಾ ಔಷಧಿ ಹಾಗೂ					22328.00	22328.00	75:20:70 gms/plant NPK, 70Kgs FYM/ plant (Twice a year)
8	ಸಾವಯವ ಗೊಬ್ಬರ ಮತ್ತು ರಸಗೊಬ್ಬರ ನೀಡುವುದು (ಗಿಡದ ಸುತ್ತ 15 ಸೆಂ.ಮೀ. ಆಳ ಮತ್ತು 15 ಸೆ. ಮೀ. ಅಗಲದ ಗುಳಿಯನ್ನು ತೆಗೆದು ಗೊಬ್ಬರ ಹಾಕಿ ಮುಚ್ಚುವುದು.	2.32/ಗಿಡ	232		232.00		232.00	
9	ಕಳೆ ತೆಗೆಯುವುದು (ವರ್ಷಕ್ಕೆ 4 ಬಾರಿ)	14.00/ ಪಾತಿ	5600.00		5600.00		5600.00	
10	ಅಂತರ ಬೇಸಾಯ (ಟ್ರಾಕ್ಟರ್ ಉಳುಮೆ)	1200/ಎಕರೆ			0.00	3000.00	3000.00	
	ಒಟ್ಟು		20832.00	6000.00	26832.00	28168.00	55000.00	
		%	77.64	22.36				

ಸೂಚನೆ : 1. ಮೇಲೆ ನಮೂದಿಸಲಾಗಿರುವ ಕಾರ್ಯಕ್ರಮಗಳಲ್ಲಿ ಫಲಾನುಭವಿಯು ಅನುಷ್ಠಾನಗೊಳಿಸದಿರುವ ಕಾರ್ಯಕ್ರಮವನ್ನು ಬೇಸಾಯ ವೆಚ್ಚದಿಂದ ಕಡಿತಗೊಳಿಸುವುದು ಹಾಗೂ ಈ ಬಗ್ಗೆ ದೃಢೀಕರಣಗೊಳಿಸುವುದು. ಅಲ್ಲದೇ, ಎಲ್ಲಾ ಕಾಮಗಾರಿಗಳ ಅನುಷ್ಠಾನ ಪೂರ್ವ ಮತ್ತು ಅನುಷ್ಠಾನ ನಂತರ ದೃಢೀಕರಣಗೊಳಿಸುವುದು ಮತ್ತು NREGS ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು.

2. ಅಂದಾಜು ಬೇಸಾಯ ವೆಚ್ಚದ ವಿವರವು monocropping ಗೆ ತಯಾರಿಸಲಾಗಿದ್ದು, monocropping ಇರುವಲ್ಲಿ ಮಾತ್ರ ಮೇಲಿನ ಅಂದಾಜು ಬೇಸಾಯ ವೆಚ್ಚದ ವಿವರವು ಅನ್ವಯಿಸುತ್ತದೆ. ಅಂತರಬೆಳೆ/ಮಿಶ್ರಬೆಳೆ ಇದ್ದಲ್ಲಿ, ಮಾವು ಮತ್ತು ಸಪೋಟ ಪ್ರದೇಶ cover ಆಗಿರುವುದನ್ನು ಮಾತ್ರ ಪರಿಗಣಿಸುವುದು.

1 ಹೆಕ್ಟೇರ್ ಪ್ರದೇಶದಲ್ಲಿ ಅಂಗಾಂಶ ಕೃಷಿ ಬಾಳೆ ತೋಟವನ್ನು ಅಭಿವೃದ್ಧಿಪಡಿಸಲು ತಗಲುವ ಅಂದಾಜು ವೆಚ್ಚ

ಇಲಾಖೆ : ತೋಟಗಾರಿಕೆ ಶಾಖೆ : ಯೋಜನಾ ವಿಭಾಗ

ಅಂತರ : 2 x 2 ಮೀ, ಗಿಡಗಳ ಸಂಖ್ಯೆ : 2500

(ರೂ.ಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮವಾರು ವಿವರಗಳು	ಘಟಕ ವೆಚ್ಚ (ರೂ)	ಕೂಲಿ ವೆಚ್ಚ	ಸಾಮಗ್ರಿ ವೆಚ್ಚ	ಒಟ್ಟು ವೆಚ್ಚ	ಕೂಲಿ ವೆಚ್ಚ	ಒಟ್ಟು ವೆಚ್ಚ	ಷರಾ
			NREGS			ರೈತರು ಭರಿಸ ಬೇಕಾಗಿರುವ ಮೊತ್ತ	NREGS+ FARMERS	
1	ಪೊದೆ ತೆಗೆದು ಭೂಮಿಯನ್ನು ಸಮತೋಲನ ಮಾಡುವುದು	0.8/ಚ.ಮೀ			00.00	8000.00	8000.00	
2	ಗುಂಡಿ ತೆಗೆಯುವುದು @ 0.45 ಘನ ಮೀ.	9.02/ ಗುಂಡಿ	22500.00		22500.00		22500.00	
3	ಗಿಡಗಳ ವೆಚ್ಚ	12.00/ಗಿಡ			0.00	30000.00	30000.00	
4	ಮಣ್ಣು, ಮರಳು ಮತ್ತು ಇತರೆ ಸಾಮಗ್ರಿ ವೆಚ್ಚ	10.00/ಯೂನಿಟ್		2000.00	2000.00	8000.00	10000.00	
5	ಗಿಡ ನೆಡುವುದು	12.00/ ಗಿಡ	30000.00		30000.00		30000.00	
6	ರಾಸಾಯನಿಕ, ಕೊಟ್ಟಿಗೆ ಗೊಬ್ಬರ, ಸಾವಯವ ಗೊಬ್ಬರ, ಸಸ್ಯ/ಬೀಜೋಪಚಾರ, ಸಸ್ಯ ಸಂರಕ್ಷಣಾ ಔಷಧಿ ಹಾಗೂ ಇತ್ಯಾದಿ					13500.00	13500.00	200:100:300 gms/plant NPK, 2Kgs FYM/ plant (Twice a year)
7	ಸಾವಯವ ಗೊಬ್ಬರ ಮತ್ತು ರಸಗೊಬ್ಬರ ನೀಡುವುದು (ಗಿಡದ ಸುತ್ತ 15 ಸೆಂ.ಮೀ. ಆಳ ಮತ್ತು 15 ಸೆ. ಮೀ. ಅಗಲದ ಗುಳಿಯನ್ನು ತೆಗೆದು ಗೊಬ್ಬರ ಹಾಕಿ ಮುಚ್ಚುವುದು.	2.32/ಗಿಡ	5000		5000.00		5000.00	
8	ಕಳೆ ತೆಗೆಯುವುದು (ವರ್ಷಕ್ಕೆ 1 ಬಾರಿ)		3000.00		3000.00		3000.00	
9	ಅಂತರ ಬೇಸಾಯ (ಟ್ರಾಕ್ಟರ್ ಉಳುಮೆ)	1200/ಎಕರೆ			0.00	3000.00	3000.00	
	ಒಟ್ಟು		60500.00	2000.00	62500.00	62500.00	125000.00	
		%	96.8	3.20				

ಸೂಚನೆ : 1. ಮೇಲೆ ನಮೂದಿಸಲಾಗಿರುವ ಕಾರ್ಯಕ್ರಮಗಳಲ್ಲಿ ಫಲಾನುಭವಿಯು ಅನುಷ್ಠಾನಗೊಳಿಸದಿರುವ ಕಾರ್ಯಕ್ರಮವನ್ನು ಬೇಸಾಯ ವೆಚ್ಚದಿಂದ ಕಡಿತಗೊಳಿಸುವುದು ಹಾಗೂ ಈ ಬಗ್ಗೆ ದೃಢೀಕರಣಗೊಳಿಸುವುದು. ಅಲ್ಲದೇ, ಎಲ್ಲಾ ಕಾಮಗಾರಿಗಳ ಅನುಷ್ಠಾನ ಪೂರ್ವ ಮತ್ತು ಅನುಷ್ಠಾನ ನಂತರ ದೃಢೀಕರಣಗೊಳಿಸುವುದು ಮತ್ತು NREGS ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು.

2. ಅಂದಾಜು ಬೇಸಾಯ ವೆಚ್ಚದ ವಿವರವು monocropping ಗೆ ತಯಾರಿಸಲಾಗಿದ್ದು, monocropping ಇರುವಲ್ಲಿ ಮಾತ್ರ ಮೇಲಿನ ಅಂದಾಜು ಬೇಸಾಯ ವೆಚ್ಚದ ವಿವರವು ಅನ್ವಯಿಸುತ್ತದೆ. ಅಂತರಬೆಳೆ/ ಮಿಶ್ರಬೆಳೆ ಇದ್ದಲ್ಲಿ, ಬಾಳೆ ಪ್ರದೇಶ cover ಆಗಿರುವುದನ್ನು ಮಾತ್ರ ಪರಿಗಣಿಸುವುದು.

3. ಫಲಾನುಭವಿಯು ಅನುಷ್ಠಾನಗೊಳಿಸುತ್ತಿರುವ ಬೆಳೆಯು ಅಂಗಾಂಶ ಕೃಷಿ ಬಾಳೆಯೆಂದು ದೃಢೀಕರಿಸುವುದು (RSK - AHO - 100%, SADH/ADH - 50%, DDH - 25%, Nodal JD - 5%) ಮತ್ತು ದಾಖಲಾತಿಯನ್ನು ನಿರ್ವಹಿಸುವುದು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಹಾಸನ ತಾಲ್ಲೂಕು ಜಾಗರವಳ್ಳಿ ಗ್ರಾಮಪಂಚಾಯತಿ ಮಲ್ಲಗೌಡನಹಳ್ಳಿ ಗ್ರಾಮದ ಬಿಳಿಮಣ್ಣಿನ ಕಟ್ಟೆ ಅಭಿವೃದ್ಧಿ ಕಾಮಗಾರಿಯ ಒಂದು ನೋಟ.
(ಅಂದಾಜು ವೆಚ್ಚ ರೂ. 5.00 ಲಕ್ಷಗಳು)

ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಹಾಸನ ತಾಲ್ಲೂಕು ಶಾಂತಿಗ್ರಾಮ ಗ್ರಾಮಪಂಚಾಯತಿ ದಡದಹಳ್ಳಿ ಗ್ರಾಮದ ಹನುಮಂತನ ಕಟ್ಟೆ ಅಭಿವೃದ್ಧಿ ಕಾಮಗಾರಿಯ ಒಂದು ನೋಟ.
(ಅಂದಾಜು ವೆಚ್ಚ ರೂ. 5.00 ಲಕ್ಷಗಳು)



ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಹಾಸನ ತಾಲ್ಲೂಕು ಮರ್ಕುಲಿ ಗ್ರಾಮಪಂಚಾಯತಿ ಮುತ್ತಿಗೆ ಗ್ರಾಮದ ದೊಡ್ಡಕೆರೆ ಕೋಡಿ ಅಭಿವೃದ್ಧಿ ಕಾಮಗಾರಿಯ ಒಂದು ನೋಟ.
(ಅಂದಾಜು ವೆಚ್ಚ ರೂ. 5.00 ಲಕ್ಷಗಳು)



ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಹಾಸನ ತಾಲ್ಲೂಕು ಮರ್ಕುಲಿ ಗ್ರಾಮಪಂಚಾಯತಿ ನಾಗನಹಳ್ಳಿ ಗ್ರಾಮದ ದೊಡ್ಡಕೆರೆ ಕೋಡಿ ಕಾಲುವೆ ಕಾಮಗಾರಿಯ ಒಂದು ನೋಟ.
(ಅಂದಾಜು ವೆಚ್ಚ ರೂ. 6.00 ಲಕ್ಷಗಳು)

ರೇಷ್ಮೆ ತರಬೇತಿ ಸಂಸ್ಥೆಯಲ್ಲಿ ಒಂದು ತಿಂಗಳ ರೇಷ್ಮೆ ಕರಕುಶಲ ವಸ್ತುಗಳ ತಯಾರಿಕೆ ತರಬೇತಿ ಪಡೆದ ಅವಧಿಯಲ್ಲಿ ತಯಾರಿಸಿದ ವಿವಿಧ ಬಗೆಯ ರೇಷ್ಮೆ ಕರಕುಶಲ ವಸ್ತುಗಳೊಂದಿಗೆ ಮಹಿಳೆಯರು.

ಭಾರತ ಸರ್ಕಾರದ ಸೇವೆಯಲ್ಲಿ

ಮುದ್ರಿತ ವಿಷಯ
ತೆರೆದ -ಅಂಚೆ

ಗೆ : .....

.....

.....

.....

ರವಾನೆ ಗುಮಾಸ್ತ
ಹಾಸನ ಗ್ರಾಮೀಣ ಭಾರತ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ
ಕಾರ್ಯಾಲಯ, ಯೋಜನಾ ಘಟಕ
ಜಿಲ್ಲಾ ಪಂಚಾಯತ್, ಹಾಸನ -573 201.
ದೂರವಾಣಿ :08172 - 267535

(ರಿಜಿಸ್ಟ್ರಾರ್, ವೃತ್ತ ಪತ್ರಿಕೆ, ನಿಯತಕಾಲಿಕೆಗಳು ಹಾಗೂ ಇತರೆ ಪತ್ರಿಕೆಗಳು ಇವರ ನೊಂದಾವಣೆ ನಿರೀಕ್ಷೆ ಮೇರೆಗೆ ಪ್ರಕಟಿಸಿದೆ.)